

# ಅಸಿಸ್ಸಿಯ ಅದ್ಭುತ ಸಂತ ಫ್ರಾನ್ಸಿಸ್

ಜೀ.ಎಸ್.ಜಯದೇವ

ಆಧ್ಯಾತ್ಮಿಕ ಜೀವನಕ್ಕೆ ಹೊಸ ಚೇತನವನ್ನು ನೀಡಿದ ಸಂತ ಫ್ರಾನ್ಸಿಸ್‌ನ ಜೀವನ ಆಧ್ಯಾತ್ಮಿಕ ಸಾಧಕರೆಲ್ಲರಿಗೂ ಸ್ಫೂರ್ತಿದಾಯಕವಾದುದು. ಅವರ ಜೀವನದ ಕಿರು ಪರಿಚಯವನ್ನು ನೀಡಿರುವ ಶ್ರೀ ಜಯದೇವ ಅವರು ದೀನಬಂಧು, ಶಕ್ತಿಧಾಮ ಮುಂತಾದ ಸೇವಾಸಂಸ್ಥೆಗಳನ್ನು ನಡೆಸುತ್ತಿರುವರು.

**ಪೂರ್ವ** ಪಶ್ಚಿಮಗಳೆರಡರಲ್ಲೂ ಅನೇಕ ಸಂತರು ಆಗಿ ಹೋಗಿದ್ದಾರೆ. ಸಂತರೆಲ್ಲರೂ ಜಾತಿಕುಲಗಳ ಭೇದವಿಲ್ಲದೆ, ದೇಶಕಾಲಗಳನ್ನು ಮೀರಿ ಪಸರಿಸಬಲ್ಲ ಅಕೃತ್ರಿಮ ಪ್ರೀತಿಯನ್ನು ಪ್ರಪಂಚಕ್ಕೆಲ್ಲ ಹಂಚಿದರು. ಅವರು ಯೂರೋಪ್, ಚೀನ, ಭಾರತ ಅಥವಾ ಮತ್ತೆಲ್ಲೆ ಹುಟ್ಟಿದ್ದರೂ ಅವರ ಜೀವನ ವಿಧಾನದಲ್ಲಿ, ಮಾನವ ಕೋಟಿಗೆ ಕೊಟ್ಟ ಸಂದೇಶದಲ್ಲಿ ಅದ್ಭುತವಾದ ಸಾಮ್ಯತೆಯನ್ನು ಕಾಣಬಹುದು. ಆದರೂ ಸಂತರನ್ನು ಅರ್ಥಮಾಡಿಕೊಳ್ಳುವುದು ಕಷ್ಟ. ಹಾಗೆ ಅವರು ನಡೆದ ಹಾದಿ ಸಾಮಾನ್ಯರಿಗೆ ದುಸ್ಸಾಧ್ಯವೋ ಏನೋ ಎಂಬ ಶಂಕೆಯನ್ನು ಮೂಡಿಸುತ್ತದೆ. ವೈಯಕ್ತಿಕವಾಗಿ ಆ ಎತ್ತರದ ಜೀವನವನ್ನು ಅವರು ನಡೆಸಿದರೂ, ಎಲ್ಲರಿಗೂ ಅನ್ವಯವಾಗುವ, ಸಾಧ್ಯವಾಗುವ ಸರಳ ಸುಗಮ ಮಾರ್ಗವನ್ನೂ ಅವರು ತೋರಿಸಿ ಕೊಟ್ಟಿದ್ದಾರೆ. ಅವರ ಅದ್ಭುತ ಜೀವನ ಒಂದು ಆದರ್ಶ ಮಾತ್ರ ಎಂದು ತಿಳಿಯಬೇಕು.

ಇಟಲಿ ದೇಶದ ಅಸಿಸ್ಸಿಯ ಉಂಬ್ರಿಯ ಎಂಬ ಪ್ರದೇಶದಲ್ಲಿ ಜನಿಸಿದ ಫ್ರಾನ್ಸಿಸ್, ೧೩ನೇ ಶತಮಾನದ ಒಬ್ಬ ಅದ್ಭುತ ಸಂತ. ಪಿಟ್ರೊ ಡಿ ಬರ್ನಾರ್ಡೋನ್ ಎಂಬ ತಂದೆ, ಪಿಕಾ ಎಂಬ ತಾಯಿಗೆ ೧೧೮೧-೮೨ರ ಸುಮಾರಿಗೆ ಜನಿಸಿ ೧೨೨೬ರ ವರೆಗೆ ಬಾಳಿದನು. ಯುವಕ ಫ್ರಾನ್ಸಿಸ್ ಒಬ್ಬ ಮೋಜುಗಾರ, ನಗುಮೊಗದ ಸುಂದರಾಂಗ; ನಕ್ಕು ನಗಿಸುವ ಕಲೆ ಇವನಿಗೆ ಕರಗತವಾಗಿತ್ತು. ಇವನ ಭಾವುಕ ಪ್ರೇಮಕವಿತೆಗಳು ಸಂತೋಷಕೂಟಗಳಲ್ಲಿ ಪ್ರಸಿದ್ಧವಾಗಿದ್ದವು. ಯುವಕ ಫ್ರಾನ್ಸಿಸ್ ಪ್ರಾಪಂಚಿಕನಾಗಿದ್ದ ನಿಜ. ಆದರೆ ಅವನಿಗೆ ದುರಭ್ಯಾಸಗಳಾವುವೂ ಇರಲಿಲ್ಲ. ಅವನು ಸೈನ್ಯಕ್ಕೆ ಸೇರಿ ಪೆರುಗಿಯ ಪ್ರಾಂತ್ಯದ ವಿರುದ್ಧ ಹೋರಾಡಿ ಯುದ್ಧಕೈದಿಯಾದ. ಒಂದು ವರ್ಷದ ನಂತರ ಬಿಡುಗಡೆ ಹೊಂದಿದ, ಆದರೆ ತೀವ್ರ ಖಾಯಿಲೆಗೆ ತುತ್ತಾದ. ಆಗ ಅವನಿಗೆ ವಯಸ್ಸು ಬಹುಶಃ ಇಪ್ಪತ್ತೆರಡು ವರ್ಷಗಳು. ಈ ಆಘಾತ ಅವನ ಮೋಜಿನ ಜೀವನವನ್ನು ಅಂತ್ಯಗೊಳಿಸಿತು. ಹೊರಗೆ ಸಂತೋಷವನ್ನರಸುತ್ತಿದ್ದ ಅವನ ಮನಸ್ಸು ತನ್ನೊಳಗೆ ಆಳಕ್ಕೆ ಮುಳುಗಿ ಅಂತರ್ಯಾಮಿಯನ್ನು ಹುಡುಕತೊಡಗಿತು. ಮತ್ತೊಮ್ಮೆ ಸೈನ್ಯಕ್ಕೆ ಸೇರುವ ವಿಫಲ ಯತ್ನ ಮಾಡಿದ. ಕೊನೆಗೆ ಎಲ್ಲ ಆಸೆಗಳನ್ನೂ ತ್ಯಜಿಸಿ ತನ್ನೊಳಗಿನ ಹಿರಿ ಆಳಕ್ಕೆ ಮುಳುಗಿದ.

ಆಗ ಅಸಿಸ್ಸಿಯ ಹೊರವಲಯದಲ್ಲಿದ್ದ ಶಿಥಿಲವಾದ ಸ್ಯಾನ್ ಡೇಮಿಯಾನೋ ಆಲಯದಲ್ಲಿ ಧ್ಯಾನಸ್ಥನಾಗಿ ದಿನಕಳೆಯತೊಡಗಿದ.

ಶೀರ್ಷಿಕೆಯ ಚಿತ್ರ: ಅಮೇರಿಕಾದ ಕ್ಯಾಲಿಫೋರ್ನಿಯಾದಲ್ಲಿರುವ ಕಾರ್ಮೆಲ್ ಮಿಷನ್. ಇದು ಸಂತ ಫ್ರಾನ್ಸಿಸ್ ಸಂನ್ಯಾಸಿ ಸಮುದಾಯಕ್ಕೆ ಸೇರಿದ ಒಂದು ಕ್ರೈಸ್ತ ಮಠ

ಆ ದಿನಗಳಲ್ಲಿ ಅವನಿಗೆ ಒಂದು ಧ್ವನಿ ಸ್ಪಷ್ಟವಾಗಿ ಕೇಳಿಸಿತು, "ಫ್ರಾನ್ಸಿಸ್, ಈಗಲೆ ಹೋಗು. ನನ್ನ ಚರ್ಚುಗಳನ್ನು ಕಟ್ಟು. ಏಕೆಂದರೆ ಅವು ಹೆಚ್ಚು ಕಡಿಮೆ ಮುರಿದು ಬೀಳುವುದರಲ್ಲಿವೆ." ಈ ಕರೆಗೆ ಓಗೊಟ್ಟು ತನ್ನ ಬಂಧು ಬಾಂಧವರನ್ನು ತೊರೆದುಬಿಟ್ಟ. ಮುಂದಿನ ಎರಡು ವರ್ಷಗಳಲ್ಲಿ ಫ್ರಾನ್ಸಿಸ್ ಶಿಥಿಲಗೊಂಡ ಮೂರು ಚರ್ಚ್‌ಗಳ ಪುನರ್ನಿರ್ಮಾಣ ಕಾರ್ಯ ನಡೆಸಿದ. ಆದರೆ ನಿಧಾನವಾಗಿ ಆ ದೈವೀಕರೆಯ ಒಳಮರ್ಮ ಅವನಿಗೆ ಅರಿವಾಯಿತು. ಅವನು ನಿರ್ಮಿಸಬೇಕಾಗಿದ್ದುದು ಈ ಸ್ಥೂಲ ಚರ್ಚುಗಳಲ್ಲ. ಪ್ರತಿ ಮನಮನದಲ್ಲೂ ಶಿಥಿಲಗೊಂಡಿದ್ದ ಚರ್ಚುಗಳು ಎಂಬುದನ್ನು ನಿಧಾನವಾಗಿ ಕಂಡುಕೊಂಡ. ತನ್ನ ಇಡೀ ಜೀವನವನ್ನು ಅದಕ್ಕಾಗಿ ಮುಡಿಪಾಗಿಟ್ಟ.

ಈ ಚರ್ಚುಗಳ ನಿರ್ಮಾಣ ಸಂದರ್ಭದಲ್ಲಿ ಅವನ ಭಾವನೆಯ ತೀವ್ರತೆಯನ್ನು ಪ್ರತಿಬಿಂಬಿಸುವ ಘಟನೆಯೊಂದು ನಡೆಯಿತು. ಫ್ರಾನ್ಸಿಸ್‌ನ ತಂದೆ ದೊಡ್ಡ ಬಟ್ಟೆ ವ್ಯಾಪಾರಿ. ಚರ್ಚ್ ಕಟ್ಟಲು ಕರೆ ಬಂದೊಡನೆಯೆ ಫ್ರಾನ್ಸಿಸ್ ತನ್ನ ಮನೆಯಲ್ಲಿದ್ದ ಮತ್ತು ಅಂಗಡಿಯಲ್ಲಿದ್ದ ಬಹುಪಾಲು ಬಟ್ಟೆಯನ್ನು ಗಂಟುಕಟ್ಟಿಕೊಂಡು ಕುದುರೆ ಮೇಲೆ ಕೊಂಡುಹೋಗಿ ಕುದುರೆ ಸಮೇತ ಮಾರಿಬಿಟ್ಟ.

---

ನಿನ್ನ ಮಾತಿನ ಮೂಲಕ ನೀನು ಶಾಂತಿಯನ್ನು ಬೋಧಿಸಬೇಕಾದರೆ, ಮೊದಲು ನಿನ್ನ ಹೃದಯ ಶಾಂತಿಯಿಂದ ತುಂಬಿ ತುಳುಕುತ್ತಿರಬೇಕು. ಯಾರಿಂದಲೂ ಕೋಪಕ್ಕೊಳಗಾಗಬೇಡ ಮತ್ತು ಯಾರನ್ನೂ ಕೋಪಗೊಳ್ಳುವಂತೆ ಮಾಡಬೇಡ. ನಿನ್ನ ದೈನ್ಯತೆಯ ಮೂಲಕ ಶಾಂತಿ ದಯೆಗಳಿಂದ ಕೂಡಿರುವುದು ಹೇಗೆಂಬುದನ್ನು ಇತರರಿಗೆ ತೋರಿಸು. —*ಸಂತ ಫ್ರಾನ್ಸಿಸ್*

---

ಬಂದ ಹಣವನ್ನು ಚರ್ಚ್ ಕಟ್ಟಲು ವಿನಿಯೋಗಿಸಿದ. ಇವನ ತಂದೆಗೆ ಕೋಪಬಂತು. ಮಗನನ್ನು ಕೋರ್ಟಿಗೆ ಎಳೆಯಲು ಪ್ರಯತ್ನಿಸಿದ. ಆದರೆ ಮಗ ಜಗ್ಗಲಿಲ್ಲ. ಆಗ ತಂದೆ ಮಗನನ್ನು ಬಿಶಪ್‌ನ ಬಳಿ ತಂದು ನಿಲ್ಲಿಸಿದ. ಆಗ ಫ್ರಾನ್ಸಿಸ್ ತಾನು ಹಾಕಿಕೊಂಡಿದ್ದ ಬಟ್ಟೆಯನ್ನು ಬಿಚ್ಚಿಹಾಕಿ ಅವನ್ನು ಹರಿದು ತನ್ನ ತಂದೆಗೆ ಕೊಟ್ಟು, ನೀನು ನನ್ನ ತಂದೆ ಅಲ್ಲ, ಸ್ವರ್ಗದಲ್ಲಿರುವ ಆ ದೇವರೇ ನನ್ನ ತಂದೆ ಎಂದು ನಗ್ನನಾಗಿ ನಿಂತುಬಿಟ್ಟ. ಬಿಶಪ್‌ಗೆ ಇವನ ಭಾವದ ತೀವ್ರದ ಅರಿವಾಯಿತು. ಫ್ರಾನ್ಸಿಸ್‌ಗೆ ಮೇಲಂಗಿಯನ್ನು ನೀಡಿ ತನಗಿಷ್ಟವಾದ ದಾರಿಯಲ್ಲಿ ಹೋಗಲು ಬಿಟ್ಟುಕೊಟ್ಟ. ಈ ಸಂದರ್ಭದಲ್ಲಿ ನಮಗೆ ಶ್ರೀರಾಮಕೃಷ್ಣರ ಶಿಷ್ಯರಾದ ನಾಗಮಹಾಶಯರ ಜೀವನದ ಘಟನೆಗಳು ನೆನಪಿಗೆ ಬರುತ್ತವೆ.

ಕೆಲವೊಮ್ಮೆ ಈ ಸಂತರ ನಡವಳಿಕೆ ನಮಗೆ ಅರ್ಥವಾಗುವುದಿಲ್ಲ. ಈ ಅಸಿಸ್ಸಿಯ ಸಂತ ಕೆಲವೊಮ್ಮೆ ಭೋಜನಕ್ಕೆ ಸಿದ್ಧವಾದ ಊಟದ ಮೇಜಿನ ಮೇಲೆ ಬೂದಿಯನ್ನು ತಂದು ಎರಚಿಬಿಡುತ್ತಿದ್ದ. ಶಿರಡಿ ಸಾಯಿಬಾಬಾರ ಜೀವನದಲ್ಲೂ ಈ ಬಗೆಯ ಅತಿರೇಕದ ನಡವಳಿಕೆಗಳನ್ನು ಕಾಣುತ್ತೇವೆ. ಈ ಬಗೆಯ ನಡವಳಿಕೆಗೆ, ಅದಕ್ಕೆ ಕಾರಣವಾಗಬಹುದಾದ ವಿಚಾರಗಳಿಗೆ ಅಂತಹ ಅದ್ಭುತ ಅರ್ಥವನ್ನು ಕಂಡುಹಿಡಿಯುವುದು ಅಸಾಧ್ಯವೋ ಏನೋ? ಆದರೆ ಹೇಗೆ ಒಂದು ವೃಕ್ಷದ ಫಲಭರಿತ ಶಾಖೆಗಳಲ್ಲಿ ಕೆಲವೊಂದು ಒಣಗಿದ ಚಿಕ್ಕ ಚಿಕ್ಕ ಕೊಂಬೆಗಳು ಕಂಡುಬರುತ್ತವೊ ಹಾಗೆ ಈ ಅಸಂಬದ್ಧ ನಡವಳಿಕೆಗಳು ಅದ್ಭುತ ಆಧ್ಯಾತ್ಮಿಕ ಫಲವನ್ನು ಹೊತ್ತ ಬೃಹತ್ ಭಾವಮಯ ಶಾಖೆಗಳಿಗೆ ಅಂಟಿಕೊಂಡ ಒಣಗಿದ ಚಿಕ್ಕ ಕೊಂಬೆಗಳೆಂದೇ ಭಾವಿಸಬಹುದು. ಒಣಗಿದ ಈ ಕೊಂಬೆಗಳೂ ಸಹ ಹಿಂದೊಮ್ಮೆ ಹಸಿರಿನಿಂದ ಕೂಡಿ, ಬೆಳೆಯುತ್ತಿದ್ದ ಆ ಫಲಕ್ಕೆ ಸಾರ ಒದಗಿಸಿದ್ದಿರಬಹುದು.

---

ಈ ಪ್ರಪಂಚದಲ್ಲಿ ಎಲ್ಲ ವಿಪತ್ತುಗಳು ಮತ್ತು ಶೋಚನೀಯ ಪತನಗಳು ಉಂಟಾಗುವುದು ಅಹಂಕಾರದಿಂದ ತಲೆ ಎತ್ತುವುದರಲ್ಲೇ ಹೊರತು ಮತ್ತಾವುದರಿಂದಲೂ ಅಲ್ಲ.

—*ಸಂತ ಫ್ರಾನ್ಸಿಸ್*

---

ಅಸಿಸ್ಸಿಯ ಈ ಸಂತನ ಉಡುಗೆ ತೊಡುಗೆಗಳು ಒರಟಾಗಿದ್ದವು. ಒರಟಾದ ನಿಲುವಂಗಿ, ಸೊಂಟಕ್ಕೆ ಬೆಲ್ಟಿನ ಬದಲಾಗಿ ಸುತ್ತಿಕೊಂಡ ಒರಟು ಹಗ್ಗ, ತೀವ್ರ ಸಾಧನೆಯಿಂದ ಕೃಶಗೊಂಡ ಶರೀರ, ಯಾರ ಗಮನವನ್ನೂ ಸೆಳೆಯಲಾಶಿಸದ ನಿರಾಸಕ್ತ ಮುಖಭಾವ, ದೇವರು ಸೃಷ್ಟಿಸಿದ ಸಾವಿರಾರು ಜೀವಜಂತುಗಳಲ್ಲಿ ತಾನೂ ಒಬ್ಬ ಎಂಬ ನಿರಾಡಂಬರ ಭಾವ. ಒಟ್ಟಿನಲ್ಲಿ ಮೊದಲಿಗೆ ನೋಡಿದವರಾರೂ ಇವನನ್ನು ಸಂತನೆಂದು ಗುರುತಿಸಲಾರರು. ಇವನಿಗೆ ಸಮೃದ್ಧಿಗಿಂತ ಬಡತನದಲ್ಲಿ ನಂಬಿಕೆ ಹೆಚ್ಚು. ಬಡತನವನ್ನು ತನ್ನ ಹೆಂಡತಿ ಎಂದು ಭಾವಿಸುತ್ತಿದ್ದ. ಸಂತೋಷದ ಸ್ಥಿತಿಗಿಂತ ದುಃಖದ ಸ್ಥಿತಿಯಲ್ಲೇ ಮನುಷ್ಯ ಅರ್ಥಪೂರ್ಣವಾದುದನ್ನು ಕಲಿಯುತ್ತಾನೆ ಎಂಬ ಸ್ವಾಮಿ ವಿವೇಕಾನಂದರ ಅನುಭವದ ಮಾತನ್ನೂ ನಾವಿಲ್ಲಿ ಸ್ಮರಿಸಬಹುದು. ಥಾಮಸ್. ಎ.ಕೆಂಪಿಸ್ ಸಹ ತನ್ನ ಇಮಿಟೇಷನ್ ಆಫ್ ಕ್ರೈಸ್ತ್ ಪುಸ್ತಕದಲ್ಲಿ ಇದೇ ಮಾತನ್ನು ಹೇಳುತ್ತಾನೆ. ಆದ್ದರಿಂದ ಸಂತರೆಲ್ಲರೂ ಐಶಾರಾಮದ ಜೀವನದಿಂದ ದೂರವಿದ್ದರು. ಬಡತನವನ್ನು ಬೇಡಿ ಪಡೆಯುತ್ತಿದ್ದರು. ಫ್ರಾನ್ಸಿಸ್ ರೋಮಿಗೆ ತೀರ್ಥಯಾತ್ರೆ ಹೋದ—ಬಹುಶಃ ಬಡತನವನ್ನನುಭವಿಸಲು. ಹರುಕು ಬಟ್ಟೆ ಉಟ್ಟು ಭಿಕ್ಷುಕರ ಜೊತೆ ಭಿಕ್ಷೆ ಬೇಡಿದ. ಹಿಂದಿನ ದಿನಗಳಲ್ಲಿ ಫ್ರಾನ್ಸಿಸ್ ಕುಷ್ಠ ರೋಗಿಗಳನ್ನು ಕಂಡರೆ ಅಸಹ್ಯ ಪಡುತ್ತಿದ್ದ. ಆದರೆ ಈಗ ಕುಷ್ಠ ರೋಗಿಯೊಬ್ಬನಿಗೆ ಸಂತೋಷದಿಂದ ಭಿಕ್ಷೆ ನೀಡಿದ. ಅಷ್ಟೆ ಅಲ್ಲ ಅವನ ರೋಗಿಷ್ಠ ಕೈಯನ್ನು ಚುಂಬಿಸಿದ. ಇದೊಂದು ಸಾಧನೆಯ ವಿಧಾನ. "ಅನ್ಯರಿಗೆ ಅಸಹ್ಯ ಪಡಬೇಡ" ಎಂಬ ಶರಣರ ನುಡಿಯನ್ನು ಅಕ್ಷರಶಃ ಪಾಲಿಸುವ ವಿಧಾನ.

ಮಾನವಸಹಜ ದುರ್ಬಲತೆಗಳ ವಿರುದ್ಧ ಎಲ್ಲ ಸಂತರೂ ಹೋರಾಡಬೇಕಾಯಿತು. ಫ್ರಾನ್ಸಿಸ್ ಸಹ ಕಷ್ಟಪಟ್ಟು ಹೋರಾಡಿದ. ಕೊರೆಯುವ ಚಳಿರಾತ್ರಿಯಲ್ಲಿ ಫ್ರಾನ್ಸಿಸ್ ತನ್ನ ಗುಡಿಸಿಲಿನಲ್ಲಿ ಏಕಾಕಿಯಾಗಿ ಇದ್ದಾಗ ಸಂಸಾರಕ್ಕೆ ಸಂಬಂಧಪಟ್ಟ ಆಲೋಚನೆಗಳು ಇವನನ್ನು ಕಾಡತೊಡಗಿದವು. ಕೊರೆವ ಚಳಿಯಲ್ಲೇ ಹೊರಗೆ ಬಂದು ಹೆಚ್ಚು ಕಡಿಮೆ ನಗ್ನನಾಗಿ ಸುತ್ತ ಬಿದ್ದಿದ್ದ ಮಂಜಿನಲ್ಲಿ ಹೊರಳಾಡಿದ. ಬಿದ್ದಿದ್ದ ಮಂಜಿನಲ್ಲೆ ಏಳು ಗುಡ್ಡೆಗಳನ್ನು ಮಾಡಿದ. ತನಗೆ ತಾನೇ ಹೇಳಿದ—"ಹೇ ಫ್ರಾನ್ಸಿಸ್, ನೋಡು ಇದೇ ನಿನ್ನ ಸಂಸಾರ. ಆ



ಸಂತ ಫ್ರಾನ್ಸಿಸ್ ಭಾವಸಮಾಧಿಯಲ್ಲಿ, ವೆನಿಸ್ಸಿನ ಕಲಾಕಾರ
ಜಿಯೊವನ್ನಿ ಬೆಲ್ಲಿನಿ (Giovanni Bellini) ಅವರ ಪುರಾತನ ವರ್ಣಚಿತ್ರ

ದೊಡ್ಡ ಗುಡ್ಡೆ ನಿನ್ನ ಹೆಂಡತಿ, ಅವು ನಿನ್ನ ಮಕ್ಕಳು, ಆ ಎರಡು ಗುಡ್ಡೆಗಳು ನಿನ್ನ ಕೆಲಸದ ಆಳುಗಳು. ಆದರೆ ಅವೆಲ್ಲ ತಣ್ಣಗೆ ಕೊರೆಯುತ್ತಿವೆ. ಅವುಗಳಿಗೆ ಹೊದಿಸಲು ನಿನ್ನ ಬಳಿ ಏನಾದರು ಇದೆಯೇ? ಏನೂ ಇಲ್ಲ ಎಂದಮೇಲೆ ಆ ನಿನ್ನ ದೇವರಿಗೇ ಸೇವೆ ಸಲ್ಲಿಸುತ್ತಿದ್ದರೆ ಸಾಲದೆ?" ಆದರೆ ಈ ಸಂತ ಸಂಸಾರವನ್ನು ನಿರಾಕರಿಸಿದವನಲ್ಲ. ಬದಲಾಗಿ ತನ್ನ ಸಂಸಾರವನ್ನು ಸಕಲಜೀವರಾಶಿಗಳಿಗೂ, ಅಷ್ಟೇ ಏಕೆ ಸೂರ್ಯ-ಚಂದ್ರರವರೆಗೂ ವಿಸ್ತರಿಸಿಬಿಟ್ಟ. ನೀರನ್ನು ತಂಗಿ ಎಂದು ಕರೆದ. ಆಕೆ ಶೀತಲೆ, ಸೌಜನ್ಯವತಿ, ಅತಿ ವಿಧೇಯಳು ಎಂದ. ಬೆಂಕಿಯನ್ನು ಸಹೋದರ, ಅವನು ಬಲಶಾಲಿ ಧೀರ ಎಂದ.

ಫ್ರಾನ್ಸಿಸ್‌ನಿಂದ ಪ್ರಭಾವಿತರಾಗಿ ಅನೇಕರು ಅವನ ಅನುಯಾಯಿಗಳಾದರು. ಅವರನ್ನು "ಲಿಟಲ್ ಬ್ರದರ್ಸ್ ಆಫ್ ಕ್ರೈಸ್ಟ್" (ಕ್ರಿಸ್ತನ ಕಿರಿಯ ಸೋದರರು) ಎಂದು ಕರೆಯಲಾಗುತ್ತಿತ್ತು. ಇವರು ಪ್ರಪಂಚಕ್ಕೆಲ್ಲ ಆಧ್ಯಾತ್ಮಿಕ ಸ್ನೇಹವನ್ನು ಬೋಧಿಸುತ್ತಿದ್ದರು. ಸ್ತ್ರೀ ಅನುಯಾಯಿಗಳ ಗುಂಪೂ ಸಹ ತಯಾರಾಯಿತು. ಜನಸಾಮಾನ್ಯರು—ಗೃಹಸ್ಥರು ಅಥವಾ ಅವಿವಾಹಿತರೂ ಸಹ ಫ್ರಾನ್ಸಿಸ್‌ನ ಕರೆಗೆ ಓಗೊಟ್ಟು ಬಡವರ, ರೋಗಿಗಳ ಸೇವೆ ಮಾಡಲು ಶಪಥ ತೊಟ್ಟರು. ತಮಗೆ ಒದಗಿಬಂದ ಸಂಪತ್ತು ಭಗವಂತನದೆಂದು ಭಾವಿಸಿ ಬಡವರಿಗೆ ವಿನಿಯೋಗಿಸಲು ಮುಂದಾದರು. ಶತ್ರುಗಳೊಡನೆ ಸ್ನೇಹ ಬೆಳಸಬೇಕೆಂದು, ಅಸ್ತ್ರಗಳನ್ನು ಎಂದೂ ಧರಿಸಬಾರದೆಂದು ಮತ್ತು ಸಾರ್ವಜನಿಕವಾಗಿ ಮನ್ನಣೆಯನ್ನು ಎಂದೂ ಅಂಗೀಕರಿಸಬಾರದೆಂದು ಪಣತೊಟ್ಟರು. ನಿಜವಾದ ಪವಾಡ ಎಂದರೆ ಇದೆ. ಸ್ವಾರ್ಥಪರವಾದ ಜನಗಳ ಮನಸ್ಸನ್ನು ನಿಃಸ್ವಾರ್ಥದೆಡೆಗೆ ತಿರುಗಿಸುವುದು. ಇದು ಸಾಮಾನ್ಯರಿಗೆ ಸಾಧ್ಯವಾಗದ ಕೆಲಸ.

ಫ್ರಾನ್ಸಿಸ್ ತನ್ನ ಅನುಯಾಯಿಗಳಿಗೆ ಹೇಳುತ್ತಿದ್ದ—"ಯಾವಾಗಲೂ ನಿಮ್ಮ ಅಂತರಂಗ ಆನಂದದಿಂದ ತುಂಬಿರಲಿ. ಏಕೆಂದರೆ ಕತ್ತಲೆ ಕವಿದು, ಏಕಾಕಿತನದಿಂದ ನಿರಾನಂದಮಯವಾದ ಮನಸ್ಸು ಪ್ರಾಪಂಚಿಕ ವಸ್ತುಗಳಲ್ಲಿ ಸಾಂತ್ವನವನ್ನರಸುತ್ತದೆ." ನಮ್ಮ ಮನಸ್ಸನ್ನೆ ಗಮನಿಸಿದರೆ ಈ ಮಾತು ಎಷ್ಟು ಸತ್ಯ ಎಂದು ತಿಳಿಯುತ್ತದೆ. ಅಂತರಂಗದ ಆನಂದದ ಚಿಲುಮೆ ಸದಾ ಪುಟಿಯುತ್ತಿದ್ದರೆ ಯಾರು ತಾನೆ ವಿಷಯಾಸಕ್ತರಾಗುತ್ತಾರೆ?

ತನ್ನ ಅನುಯಾಯಿಗಳಲ್ಲೊಬ್ಬನು ಜೋಲು ಮುಖ ಹಾಕಿಕೊಂಡಿರುವುದನ್ನು ಫ್ರಾನ್ಸಿಸ್ ಗಮನಿಸಿದನು. ಅವನಿಗೆ ತೀಕ್ಷ್ಣವಾಗಿ ಹೇಳಿದನು : "ಭಗವಂತನ ದಾಸನು ಜನರ ಮುಂದೆ ಎಂದಿಗೂ ದುಃಖದ ಮುಖವನ್ನು ತೋರಿಸಬಾರದು. ಅವನು ಯಾವಾಗಲೂ ಉತ್ಸಾಹಭರಿತನಾಗಿರಬೇಕು. ನೀನು ತಪ್ಪು ಮಾಡಿದ್ದರೆ ನಿನ್ನ ಕೊಠಡಿಗೆ ಹೋಗಿ ನಿನ್ನನ್ನು ಪರೀಕ್ಷಿಸಿ ಕೊಂಡು ನಿನ್ನ ತಪ್ಪಿಗಾಗಿ ಭಗವಂತನ ಮುಂದೆ ರೋದಿಸು. ಆದರೆ ನೀನು ನಿನ್ನ ಸಹೋದರರೊಡನೆ ಇರುವಾಗ ನಿನ್ನ ದುಃಖವನ್ನು ಬದಿಗಿರಿಸಿ,

**ನೀನು ದೂರುವುದು ಅಧಿಕವಾದಷ್ಟೂ ನಿನ್ನ ಕಷ್ಟವೂ ಅಧಿಕವಾಗುತ್ತದೆ ಮತ್ತು ಅದನ್ನು ಸಹಿಸುವ ಸಾಮರ್ಥ್ಯವೂ ಕಡಮೆಯಾಗುತ್ತದೆ.** —ಸಂತ ಫ್ರಾನ್ಸಿಸ್

ಇತರರಂತೆ ಉಲ್ಲಾಸದಿಂದಿರಬೇಕು."

ಎಲ್ಲ ಸಂತರೂ ನಿಗ್ರಹದ ಬಗ್ಗೆ ಸ್ಪಷ್ಟವಾಗಿ ಹೇಳುತ್ತಾರೆ. ಫ್ರಾನ್ಸಿಸ್ ಸಹ ದೇಹಾತ್ಮಬುದ್ಧಿಯ ನಿಯಂತ್ರಣದ ಬಗ್ಗೆ ತನ್ನದೇ ಹಾಸ್ಯಭರಿತ ಶೈಲಿಯಲ್ಲಿ ಹೇಳುತ್ತಾನೆ. ಅವನು ದೇಹವನ್ನು "ಸೋದರ ಕತ್ತೆ" (Brother ass) ಎನ್ನುತ್ತಿದ್ದ. ಹೇಳುತ್ತಿದ್ದ ಈ ದೇಹವೆಂಬ ಕತ್ತೆಗೆ ಹಸಿವಾದಾಗ ಎಷ್ಟು ಬೇಕೋ ಅಷ್ಟು ಮಾತ್ರ ಆಹಾರ ಕೊಡಿ, ದಣಿವಾದಾಗ ವಿಶ್ರಾಂತಿ ಕೊಡಿ, ಬಾಯಾರಿದಾಗ ನೀರು ಕೊಡಿ, ನೆರಳಿನಲ್ಲಿಟ್ಟು ಸಹಾನುಭೂತಿಯಿಂದ ಕಾಣಿ. ಆದರೆ ನೆನಪಿಡಿ. ಆ ಕತ್ತೆಯ ಮೇಲೆ ಸವಾರಿ ಮಾಡಬೇಕಾದದ್ದು ನೀವು. ನಿಮ್ಮ ಮೇಲೆ ಕತ್ತೆ ಎಂದೂ ಸವಾರಿ ಮಾಡದಿರಲಿ."

ದ್ವೇಷವಿರುವೆಡೆಯಲ್ಲಿ ಪ್ರೀತಿಯನು ಬಿತ್ತುತ್ತ,
ನೋವು ಸಂಕಟದಲ್ಲಿ ಸಾಂತ್ವನವನೀಯುತ್ತ,
ಸಂಶಯವು ಇರುವಲ್ಲಿ ಶ್ರದ್ಧೆಯನು ಬಿತ್ತುತ್ತ
ದುಃಖತಪ್ತರಿಗಾನಂದವನು ನೀಡುತ್ತ ಇರುವಂಥ,
ನಿನ್ನ ಶಾಂತಿಯ ಕೈಗೊಂಬೆ ಮಾಡೆನ್ನ ದೇವ.

ಸಾಂತ್ವನ ಬಯಸುವ ಬದಲು
ಸಾಂತ್ವನ ನೀಡುವ ಬಯಕೆ
ಗೌರವ ಬಯಸುವ ಬದಲು
ಗೌರವನೀಯುವ ಬಯಕೆ
ಪ್ರೀತಿಯಾಶೆಯ ಬದಲು ಪ್ರೀತಿಸುವ ಬಯಕೆ
ಇವುಗಳನಿತ್ತು ರಕ್ಷಿಸು ನಮ್ಮ ದೇವದೇವ.
ನೀಡುವುದರಿಂದ ಪಡೆದಂತಾಗುವುದು,
ಕ್ಷಮಿಸುವುದರಿಂದ ಕ್ಷಮಿಸಲ್ಪಡುವೆವು,
ಮೃತ್ಯುವಿನಿಂದ ಅಮೃತತ್ತ್ವ ದೊರೆಯುವುದು.

—*ಸಂತ ಫ್ರಾನ್ಸಿಸ್*

ಸಾಮಾನ್ಯಜನ ಸಂತ ಫ್ರಾನ್ಸಿಸ್‌ನಲ್ಲಿ ವಿಶಿಷ್ಟವಾದದ್ದನ್ನು ಕಾಣ ಲಾರದೆ ಎಲ್ಲರೂ ನಿನ್ನನ್ನು ಏಕೆ ಅನುಸರಿಸುತ್ತಾರೆ ಎಂದು ನಾನಾ ಬಗೆಯಲ್ಲಿ ಪ್ರಶ್ನಿಸುತ್ತಿದ್ದುದುಂಟು. ಆದರೆ ಫ್ರಾನ್ಸಿಸ್‌ನ ಉತ್ತರ ಸರಳ. ಹೇಳುತ್ತಿದ್ದ—"ಹಿಂದೆಂದೂ ಆ ಪರಮಾತ್ಮನ ಕೃಪಾದೃಷ್ಟಿ ನನ್ನಂತಹ ಕಡು ಸಾಮಾನ್ಯನ ಮೇಲೆ ಇಷ್ಟು ಅಪಾರವಾಗಿ ಬಿದ್ದಿರ ಲಿಲ್ಲ. ಆ ಕೃಪಾದೃಷ್ಟಿಯ ಫಲವನ್ನು ನೀವು ನೋಡಿದ್ದೀರಿ. ಇದರಿಂದ ಆ ದೈವೀಶಕ್ತಿಯ ವ್ಯಾಪ್ತಿಯನ್ನೂ ಅದರ ಅದ್ಭುತ ಕಾರ್ಯವನ್ನೂ ತಿಳಿಯಿರಿ. ಹಾಗೆಯೇ ಸಾಮಾನ್ಯ ಚೇತನದ ಪರಿಮಿತಿಯನ್ನೂ ತಿಳಿಯಿರಿ."

ಸಂತ ಫ್ರಾನ್ಸಿಸ್ ಲಾ ವರ್ನ (La Verna) ಎಂಬ ಪರ್ವತ ಪ್ರದೇಶದಲ್ಲಿ ಉಪವಾಸವನ್ನಾಚರಿಸಿ ಸಾಧನೆ ಮಾಡಿದನಂತೆ. ಈ ಬೆಟ್ಟದ ಬಂಡೆಗಳಲ್ಲಿ ವಿಪರೀತವಾಗಿ ಬಿರುಕು ಬಿಟ್ಟಿವೆ. ಕ್ರಿಸ್ತನನ್ನು ಶಿಲುಬೆಗೇರಿಸಿದಾಗ ಭೂಮಿ ಸಂಕಟದಿಂದ ಈ ಬಗೆಯಲ್ಲಿ ಬಾಯ್ಬಿರಿಯಿತೆಂದು ಕ್ರಿಸ್ತನ ಭಕ್ತರು ಭಾವಿಸುತ್ತಾರೆ. ಇಲ್ಲಿ ಫ್ರಾನ್ಸಿಸ್‌ಗೆ ಅನೇಕ ದರ್ಶನಗಳಾದವು. ಕ್ರಿಸ್ತ ಶಿಲುಬೆಯಲ್ಲಿ ಅನುಭವಿಸಿದ ನೋವಿನ ಭಾವವನ್ನು ಫ್ರಾನ್ಸಿಸ್ ತನ್ನ ಮನಸ್ಸಿಗೆ ಎಷ್ಟು ತೀವ್ರವಾಗಿ ತೆಗೆದುಕೊಂಡನೆಂದರೆ ಇವನ ಕೈಕಾಲುಗಳಲ್ಲೂ ಅದೇ ಬಗೆಯ ಶಿಲುಬೆಯ ಗಾಯಗಳು ಮೂಡಿದವು. ಆ ಗುರುತುಗಳನ್ನು ಅವನು ಯಾರಿಗೂ ಕಾಣದ ಹಾಗೆ ಕೊನೆಯವರೆವಿಗೂ ಮುಚ್ಚಿಟ್ಟು ಕೊಂಡಿದ್ದನಂತೆ. ಫ್ರಾನ್ಸಿಸ್‌ನ ನಂತರ ಅವನ ಸೋದರ ಸಂನ್ಯಾಸಿ ಈ ವಿಷಯದ ಬಗ್ಗೆ ಪತ್ರ ಬರೆದು ಎಲ್ಲರಿಗೂ ತಿಳಿಸಿದ. ತನ್ನ ಅಪಾರ ದೈವಭಕ್ತಿಯನ್ನು, ತನ್ನ ಅಧ್ಯಾತ್ಮ ಅನುಭವವನ್ನು ಅವನು ಎಂದೂ ಪ್ರದರ್ಶಿಸಲಿಲ್ಲ.

ಅಕ್ಟೋಬರ್ ೨, ೧೨೨೬ರಂದು ಸಂತ ಫ್ರಾನ್ಸಿಸ್ ದೈವಾಧೀನನಾದ. ಫ್ರಾನ್ಸಿಸ್ ತನ್ನ ಜೀವನದ ಕೊನೆಯ ಎರಡು ವರ್ಷ ಕುರುಡನಾಗಿದ್ದನಂತೆ. ಆದರೇನು, ಅವನು ಚೆಲ್ಲಿದ ಅಂತರಂಗದ ಬೆಳಕು ಈ ಎಂಟುನೂರು ವರ್ಷಗಳ ಕಾಲವೂ ಕತ್ತಲಲ್ಲಿ ತತ್ತರಿಸುತ್ತಿರುವ ಮಾನವಕೋಟಿಗೆ ಪ್ರೀತಿಯ, ಸಹಿಷ್ಣುತೆಯ, ಸರಳತೆಯ ದಾರಿದೀಪವಾಗಿ ನಿಂತಿದೆ.

## ದಿವ್ಯ ಸಾಕ್ಷಾತ್ಕಾರದ ಸಂಕೇತಗಳು.

ಉಚ್ಚರಿಸಿದ ಮತ್ತು ಬರೆದ ಶಬ್ದಗಳಿಗೆ ಫ್ರಾನ್ಸಿಸ್ ತುಂಬ ಗೌರವ ತೋರಿಸುತ್ತಿದ್ದ. ಏಕೆಂದರೆ ಅವುಗಳು ಅವನ ಪಾಲಿಗೆ ದಿವ್ಯ ಸಾಕ್ಷಾತ್ಕಾರದ ಸಂಕೇತಗಳು. ತಾನು ಒಮ್ಮೆ ಬರೆದ ಶಬ್ದವನ್ನು, ಅದು ಅನವಶ್ಯಕವಾದರೂ, ಅಳಿಸಿಹಾಕುತ್ತಿರಲಿಲ್ಲ. ರಸ್ತೆಯಲ್ಲಿ ಬರವಣಿಗೆ ಇರುವ ಕಾಗದ ಬಿದ್ದಿದ್ದರೆ ಗೌರವದಿಂದ ಅದನ್ನು ಎತ್ತಿ ರಸ್ತೆಯ ಪಕ್ಕದಲ್ಲಿ ಇರಿಸುತ್ತಿದ್ದನು.

ಒಮ್ಮೆ ಅವನು ಎತ್ತಿ ಪಕ್ಕದಲ್ಲಿ ಇಡುತ್ತಿದ್ದ ಕಾಗದದಲ್ಲಿ ಯಾವುದೊ ವಿಧರ್ಮೀಯರ ಬರವಣಿಗೆ ಇದೆ ಎಂದು ಯಾರೊ ಅವನಿಗೆ ಸೂಚಿಸಿದರು. ಅದಕ್ಕೆ ಅವನು ಹೇಳಿದನು : "ಪರವಾಗಿಲ್ಲ. ಏಕೆಂದರೆ ಶಬ್ದಗಳು ವಿಧರ್ಮೀಯರದಾಗಲಿ ಇತರರದಾಗಲಿ ಅವುಗಳೆಲ್ಲವೂ ಭಗವದ್‌ಜ್ಞಾನದಿಂದಲೇ ಬಂದವುಗಳು."

ಲಿಖಿತ ಮಾತುಗಳಿಗೆ ಫ್ರಾನ್ಸಿಸ್ ತೋರಿಸುತ್ತಿದ್ದ ಪೂಜ್ಯಭಾವವು ಅವನು ಓದುತ್ತಿದ್ದ ವಿಧಾನದಲ್ಲಿಯೂ ವ್ಯಕ್ತವಾಗುತ್ತಿತ್ತು. ಚಿಂತನೆಯನ್ನು ಕೆರಳಿಸುವ ಯಾವುದಾದರೂ ಪಠ್ಯಭಾಗವು ಸಿಕ್ಕಿದರೆ, ಅವನು ಅಲ್ಲಿಗೇ ಓದುವುದನ್ನು ನಿಲ್ಲಿಸಿ, ಪುಸ್ತಕವನ್ನು ಮುಚ್ಚಿ ತಾನು ಓದಿರುವುದನ್ನು ಕುರಿತು ಆಳವಾಗಿ ಚಿಂತಿಸುತ್ತಿದ್ದ—ಒಳ್ಳೆಯದಾವುದೂ ಕಳೆದುಹೋಗಬಾರದೆಂದು. ಇದೇರೀತಿ ಓದಬೇಕೆಂದು ತನ್ನ ಸಹೋದರರನ್ನೂ ಪ್ರೇರೇಪಿಸುತ್ತಿದ್ದ. ಈ ರೀತಿ ಒಂದು ಗ್ರಂಥವನ್ನು ಓದುವುದು ಬೇಗನೆ ನೂರಾರು ವಿದ್ವತ್ಪೂರ್ಣ ಗ್ರಂಥಗಳನ್ನು ತಿರುವಿಹಾಕುವುದಕ್ಕಿಂತ ಎಷ್ಟೋ ಒಳ್ಳೆಯದು.